**ಸಿಸಿ ನಂಃ 1/18**

**ಪಿಡಬ್ಲ್ಯುಃ 1**

**ಸಾಕ್ಷಿಗೆ ಇಂದು ದಿನಾಂಕಃ 16-09-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದು ವರೆದ ಪಾಟೀ ಸವಾಲುಃ ಶ್ರೀ SNP ಆರೋಪಿ ಪರ ವಕೀಲರಿಂದ**

1. ಈ ಹಿಂದೆ ಸಾಕ್ಷ್ಯದಲ್ಲಿ ನುಡಿದಿರುವಂತಹ 1 ರಿಂದ 13 proprietorship ಗಳ ಪ್ರತ್ಯೇಕ ಅಕೌಂಟ್ ಗಳು ಇರುತ್ತವೆ. ಯಾರ ಹೆಸರಿನಲ್ಲಿ ಚೆಕ್ ನೀಡಲಾಗಿರುತ್ತದೆ ಅವರ ಅಕೌಂಟ್ ಗೆ ಚೆಕ್ ಮೊತ್ತ ಹೋಗುತ್ತದೆ ಎಂದರೆ ಸಾಕ್ಷಿಯು ಅವರು Halgekar twister and dabblers ನ proprietor ಇದ್ದು, ಸುಧೀರ್ ಹಲಗೇಕರ ಅವರ ಹೆಸರಿನಲ್ಲಿ ಸದರಿ ಚೆಕ್ ನೀಡಿದಲ್ಲಿ, ಸದರಿ ಮೊತ್ತ Halgekar twister and dabblers ನ ಅಕೌಂಟ್ ಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ಬ್ಯಾಂಕ್ ನಲ್ಲಿ Halgekar twister and dabblers represented by ಸುಧೀರ್ ಹಲಗೇಕರ ಎಂದು ಅಕೌಂಟ್ ಇರುತ್ತದೆ ಎಂದರೆ ಸರಿ. ನಿಪಿ-1 ಚೆಕ್ ನಲ್ಲಿ Halgekar twister and dabblers ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-1 ಚೆಕ್ಕನ್ನು ನನ್ನ ಹೆಸರಿನಲ್ಲಿರುವ ವೈಯಕ್ತಿಕ ಅಕೌಂಟ್ ಗೆ ಹಾಕಬೇಕಾಗುತ್ತದೆ ಎಂದರೆ ಸರಿಯಲ್ಲ.

2. ನಿಪಿ-1 ಚೆಕ್ಕನ್ನು S G Halgekar ಅವರ ಅಕೌಂಟ್ ಗೆ ಹಾಕಲಾಗಿದೆ. S G Halgekar ನ ಹೆಸರಿನಲ್ಲಿ ಒಂದು ಅಕೌಂಟ್ ಮತ್ತು Halgekar twister and dabblers ನ ಹೆಸರಿನಲ್ಲಿ ಒಂದು ಅಕೌಂಟ್ ಇರುತ್ತದೆ. ಸುಧೀರ್ ಹಲಗೇಕರ ಹೆಸರಿನಲ್ಲಿರುವ ಚೆಕ್ಕನ್ನು Halgekar twister and dabblers ನ ಹೆಸರಿನಲ್ಲಿ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ ನಿಪಿ-10 ರ ದಾಖಲಾತಿಗಳನ್ನು income tax ಇಲಾಖೆಗೆ ಕಳುಹಿಸಿರುತ್ತೇವೆ. Halgekar textiles ಮತ್ತು Halgekar twister and dabblers ನ

ಪ್ರತ್ಯೇಕ ledger book ಗಳು ಇವೆ ಎಂದರೆ ಸರಿ. ನಿಪಿ-6 ರಿಂದ ನಿಪಿ-10 ದಾಖಲಾತಿಗಳನ್ನು ತಯಾರಿಸುವ ಮೊದಲು ledger book ಅನ್ನು ನೋಡಿ ಮಾಹಿತಿ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. Halgekar textiles ಮತ್ತು Halgekar twister and dabblers ನ ledger book ಗಳನ್ನು ಹಾಜರು ಪಡಿಸಲು ಅಡಚಣೆ ಇರುವುದಿಲ್ಲ. ನಿಪಿ-6 ರಿಂದ ನಿಪಿ-7 ದಾಖಲಾತಿಗಳಲ್ಲಿ chartered accountant ಸಹಿ ಇರುವುದಿಲ್ಲ, ಕೇವಲ ನಿಪಿ-8 ರಿಂದ ನಿಪಿ-10 ರಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-6 ರಿಂದ ನಿಪಿ-10 ದಾಖಲಾತಿಗಳನ್ನು ಪ್ರಕರಣಕ್ಕೆ ಅನುಕೂಲ ಆಗುವಂತೆ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

3. ಈ ಮೊದಲು ನುಡಿದ ಆಸ್ತಿಯ ಖರೀದಿ ಮೊತ್ತ ಎಷ್ಟಿರುತ್ತದೆ ಹೇಳಲು ಬರುವುದಿಲ್ಲ. ಖರೀದಿ ಪತ್ರ ಆದ ದಿನವೇ 52 ಲಕ್ಷ ರೂ ಖರೀದಿ ಮೊತ್ತವನ್ನು ಚೆಕ್ ಮುಖಾಂತರ ನೀಡಿದ್ದಾರೆಂದರೆ ಸರಿ. ಆರೋಪಿಯು ಅದೇ ದಿನ ಪೂರ್ತಿ ಮೊತ್ತವನ್ನು ಕೊಟ್ಟಿರುವುದರಿಂದ ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದು ಕಂಡು ಬರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿಯು ನನಗೆ ಚೆನ್ನಾಗಿಯೇ ಪರಿಚಯ ಇರುತ್ತಾರೆ, ಆದರೆ ಗಾಢ ಸ್ನೇಹ ಇರುವುದಿಲ್ಲ. ಆಸ್ತಿ ಖರೀದಿ ಮಾಡುವ ಮೊದಲು ಆರೋಪಿಯ ಪರಿಚಯ ಇರಲಿಲ್ಲ ಎಂದರೆ ಸರಿ. ಆಸ್ತಿ ಮಾರಾಟದ ಸಂಬಂಧ ಆರೋಪಿ ಪರಿಚಯ ಆಗಿರುತ್ತದೆ ಎಂದರೆ ಸರಿ. ಆರೋಪಿಯು ಅಷ್ಟು ಚೆನ್ನಾಗಿ ನನಗೆ ಪರಿಚಯ ಇರದ ಕಾರಣ 10 ಲಕ್ಷ ರೂ ಕೊಡುವ ಸಂದರ್ಭ ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯೇ ನಮ್ಮ ಫ್ಯಾಕ್ಟರಿಗೆ ಬಂದು ಚೆಕ್ ನೀಡಿರುತ್ತಾರೆ. ನಿಪಿ-1 ರಲ್ಲಿರುವ ಪೂರ್ಣ ಮಾಹಿತಿಯನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ಆರೋಪಿಯು ಖಾಲಿ ಚೆಕ್ಕನ್ನು ಸಹಿ ಮಾಡಿ ಕೊಟ್ಟಿದ್ದರು ಮತ್ತು ಉಳಿದ ಮಾಹಿತಿಯನ್ನು ಅವರು ಬರೆದಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಆಗುವ ಮೊದಲು ಭದ್ರತೆಗಾಗಿ ಚೆಕ್ಕನ್ನು ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ.

4. ಆರೋಪಿಯ ಕುಟುಂಬದವರಿಗೆ ಸಾಕಷ್ಟು ಆಸ್ತಿ ಇದ್ದು, ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುತ್ತದೆ ಎಂದರೆ ಗೊತ್ತಿಲ್ಲ. ಖಾಲಿ ಚೆಕ್ಕನ್ನು ದುರೂಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇಲ್ಲಾ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ**

**5 ನೇ ಪ್ರ.ದ.ನ್ಯಾ.ದಂ. ಗಳು, ಬೆಳಗಾವಿ**